ಬಹುತೇಕ ಇದೇ ನನ್ನ ಮುಖ್ಯ ಊಟವಾಗುತ್ತಿತ್ತು. ಮಾಂಸ ಮುಟ್ಟದ ನನಗೆ ಸ್ಟಾರ್ಟರ್‌ಗಳೇ ಮೇನ್ ಕೋರ್ಸ್ ಆಗುತ್ತಿದ್ದವು. ಅದರಲ್ಲೂ ಸ್ವೀಡನ್ನಿನ ಈ ಸಾಂಪ್ರದಾಯಿಕ ರೆಸ್ಟೋರೆಂಟ್‌ನಲ್ಲಿ ಸಸ್ಯಾಹಾರವನ್ನು ನಿರೀಕ್ಷಿಸುವುದು ಅಸಾಧ್ಯವಾಗಿತ್ತು.

ಆದರೆ, ನನಗೆ ತಿಳಿದಿದೆ ಎಂದು ನಂಬಿದ್ದ ಪುಸ್ತಕದ ಈ ಅಪರಿಚಿತ ಪುಟಗಳು ತೆರೆದುಕೊಳ್ಳುತ್ತಿದ್ದ ಪರಿ ಈ ಸಂಜೆಯನ್ನು ಅತ್ಯಂತ ಸ್ವಾರಸ್ಯಕರವಾಗಿಸಿತ್ತು. ಬರ್ಕಾ ತನ್ನ ಕಥೆಯನ್ನು ಹೇಳಲು ಶುರುಮಾಡಿದಳು.

ಅವಳು ನಮ್ಮ ಗುಂಪಿನಲ್ಲಿದ್ದ ಕಿರಿಯ ವೈದ್ಯೆ. ಆಕೆಯ ತಾಯಿಯೂ ವೈದ್ಯೆ. ಅವರು ಮೂಲತಃ ಪಂಜಾಬಿನಿಂದ ಬಂದವರು. ಆದರೆ, ಬರ್ಕಾ ಇಂಗ್ಲೆಂಡಿನಲ್ಲೇ ಹುಟ್ಟಿ ಬೆಳೆದವಳು. ಹಾಗಾಗಿ, ಹೊರರೂಪ ಭಾರತೀಯಳದಾದರೂ ಮನಸ್ಸು ಬ್ರಿಟಿಷರಂತೆಯೇ ಯೋಚಿಸುತ್ತಿತ್ತು. ಅವಳ ಹುಡುಗ ಇಂಟೀರಿಯರ್ ಡಿಸೈನರ್ ಮತ್ತು ಹೆಸರು ಹಸನ್ ಎಂದು ಕೇಳಿದ್ದ ನೆನಪು.

ಹುಡುಗಿ ಮತ್ತು ಹುಡುಗನ ಕುಟುಂಬಗಳು ಧಾರ್ಮಿಕ ದ್ವೇಷದ ಕಾರಣಕ್ಕೆ ಅವರ ಮದುವೆಗೆ ಒಪ್ಪಿಗೆ ನೀಡಿರಲಿಲ್ಲ. ಬರ್ಕಾ ಎಲ್ಲರನ್ನು ವಿರೋಧಿಸಿ ಅವನೊಡನೆ 'ಲಿವಿಂಗ್–ಟುಗೆದರ್' ಅಂತ ಐದಾರು ವರ್ಷ ಕಳೆದಿದ್ದಳು. ಕೆಲಸ, ಹೊಸ ಮನೆಯ ಜವಾಬ್ದಾರಿ, ಓಡಾಟ ಎಲ್ಲ ವಿಚಾರದಲ್ಲೂ ಹಸನ್ ಬರ್ಕಾಳನ್ನು ನಿರಾಶೆಗೊಳಿಸಿದ್ದ. ಅವರು ಜಗಳವಾಡಿದ್ದರು.

ಅವಳು ಗರ್ಭ ಧರಿಸಿದ ಸಮಯದಲ್ಲಿ ಹಸನ್ ಸಂಬಂಧದಿಂದ ವಿಮುಖನಾಗತೊಡಗಿದ್ದ. ಬರ್ಕಾಳಿಗೆ ಸಿಕ್ಕಾಪಟ್ಟೆ ವಾಂತಿ ಶುರುವಾಗಿತ್ತು. ಮುದ್ದಾಗಿ ಬೆಳೆದಿದ್ದ ಬರ್ಕಾ ವಾಂತಿ ಮಾಡುತ್ತಿದ್ದರೆ ಹಸನ್‌ಗೂ ವಾಂತಿ ಶುರುವಾಗುತ್ತಿತ್ತು. ಅವಳ ಸಹಾಯಕ್ಕೆ ಬರಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಎಲ್ಲದರಿಂದ ಮೂಡಿದ ತಕರಾರುಗಳಿಂದ ಬರ್ಕಾ ಸಂಬಂಧವನ್ನು ಕಡಿದುಬಿಟ್ಟಿದ್ದಳು. ಬರ್ಕಾಳ ಮನೆಯವರು ತಮ್ಮ ಧಾರ್ಮಿಕ ದ್ವೇಷವನ್ನು ಮುಂದುವರೆಸಿ ಅವಳ ಗರ್ಭವನ್ನಿಳಿಸಿದ್ದರು. ಅತ್ತ ಹಸನ್‌ನ ಮನೆಯವರು ಕೂಡ ಒಡೆದ ಈ ಸಂಬಂಧವನ್ನು ಜಗ್ಗಿ ಎಳೆದು ತುಂಡರಿಸಿದ್ದರು.

ನಮ್ಮ ನಡುವೆ ಓದುತ್ತಿರುವಾಗಲೇ ಇಷ್ಟೆಲ್ಲ ಆಗಿದ್ದರೂ ನಮಗ್ಯಾರಿಗೂ ಸುಳಿವು ಕೂಡ ಸಿಗದಂತೆ ವರ್ತಿಸಿದ್ದ ಅವಳ ಬಗ್ಗೆ ಮೆಚ್ಚುಗೆಯೂ, ಮರುಕವೂ ಒತ್ತಟ್ಟಿಗೆ ಮೂಡಿದ್ದವು. ಶುರುವಾಗುತ್ತಿದ್ದ ಹೊಸ ಬದುಕು ಅವಳ ಜೀವನದಲ್ಲಿ ಹಠಾತ್ತನೆ ತಿರುವು ತೆಗೆದುಕೊಂಡಿತ್ತು.

ಆಗೀಗ ಅವಳು ರಜಾ ತಗೊಳ್ಳುತ್ತಿದ್ದುದು, ನಾಪತ್ತೆಯಾಗುತ್ತಿದ್ದುದು, ಅವಳ ಅಮ್ಮ ಅವಳನ್ನು ಹುಡುಕಿಕೊಂಡು ವಿಶ್ವವಿದ್ಯಾಲಯಕ್ಕೆ ಬರುತ್ತಿದ್ದುದಕ್ಕೆಲ್ಲ ಈಗ ಥಟ್ಟನೆ ಕಾರಣ ಹೊಳೆಯತೊಡಗಿತ್ತು. ಅವಳ ಬಗ್ಗೆ ಸಹಾನುಭೂತಿ ಹರಿಯಿತು. ಯಾರೂ ಅವಳನ್ನು ಪ್ರಶ್ನೆ ಕೇಳಲಿಲ್ಲ. ಯಾರು ಯಾರ ಬಗ್ಗೆಯೂ ತೀರ್ಮಾನ ಹೇಳುವ ಅಥವಾ ಕೇಳದ ಕಾರಣ ಆ ಸಂಜೆ ಸಭ್ಯವಾಗಿ ಮುಂದುವರೆಯಿತು.

ಆದರೆ, ಅವಳಂತೆ ನನಗೆ ತವರಿನ ಸಹಾಯವೇನೂ ಇರಲಿಲ್ಲ. ಗಂಡನೊಡನೆ ಇಲ್ಲ ಎಂಬ ಒಂದೇ ಕಾರಣಕ್ಕೆ ಅವಮಾನಿಸದೆ ಊಟ ಹಾಕುತ್ತಿದ್ದ ಪರದೇಶವೇ ನನ್ನ ತವರಾಗಿತ್ತು. ನನ್ನದು ಅವಳಂತೆಯೇ ಇಬ್ಬಂದಿ ಬದುಕು ಅನ್ನಿಸಿ ಮೌನವಾಗಿದ್ದೆ.

ಗಡಿಯಾರದ ಚಲನೆಯ ರೀತಿಯಲ್ಲಿ ಹೋಗುತ್ತಿದ್ದ ಸರದಿಯಲ್ಲಿ ಈಗ ಅಬ್ದುಲ್ ಅಜೀಜ್ ತನ್ನ ಕಥೆ ಹೇಳಬೇಕಿತ್ತು. ಸುಖದ ಸುಪ್ಪತ್ತಿಗೆಯಲ್ಲೇ ಬೆಳೆದಿರಬಹುದಾದ ಅಬ್ದುಲ್ ಅಜೀಜ್‌ನ ಬದುಕಿನಲ್ಲಿ ಕಷ್ಟಗಳಿರಲು ಸಾಧ್ಯವೇ? ಎಲ್ಲರ ಕಣ್ಣುಗಳೂ ಅವನೆಡೆ ತಿರುಗಿದವು.

ಇರಾಕಿನ ಅಬ್ದುಲ್ ಅಜೀಜ್ ನಮ್ಮಲ್ಲಿದ್ದ ಅತ್ಯಂತ ಸಿರಿವಂತ. ಅವನ ಕಾರು ಕೋಟಿಗೂ ಹೆಚ್ಚಿನ ಬೆಲೆಯದಾಗಿತ್ತು. ಅವನು ತೊಡುತ್ತಿದ್ದ ಬಟ್ಟೆ, ಮಾಡುತ್ತಿದ್ದ ಊಟ ಎಲ್ಲವೂ ಅವನ ಐಶರಾಮಿ ಜೀವನವನ್ನು ಸಾರಿ ಹೇಳುತ್ತಿದ್ದವು. ಅವನು ಯಾವಾಗಲೂ ಹಸನ್ಮುಖಿ.